

# ಒರಾಂಗುಟಾನ್ ಎಂಬ ವೈದ್ಯನಿಗೆ ವಿಜ್ಞಾನಿಗಳೇ ಶಿಷ್ಯಂದಿರು!

**‘ರಾಕಸ್’ ಎಂಬ ಒರಾಂಗುಟಾನ್ ತನ್ನ ಚಿಕಿತ್ಸಾ ಪದ್ಧತಿಯಿಂದ ವಿಜ್ಞಾನಿಗಳಿಗೆ ಅಚ್ಚರಿ ಹುಟ್ಟಿಸಿದೆ. ತನ್ನ ಗಾಯಕ್ಕೆ ತಾನೇ ಮದ್ದು ಮಾಡಿಕೊಂಡ ಈ ಒರಾಂಗುಟಾನ್ ಕಥೆ ಹಲವು ಪಾಠಗಳನ್ನೂ ಹೇಳುತ್ತದೆ.**

**■ ರಾಮಚಂದ್ರ ಭಟ್ ಬಿ.ಜಿ.**

ಭೂಮಿ ಮೇಲಿನ ಅತೀ ನಿಗೂಢ ಎಂದರೆ ಅಮೆಜಾನ್ ಕಾಡುಗಳು. ಇಂತಹ ಅನೇಕ ನಿಗೂಢಗಳು ಭೂರಮೆಯ ಒಡಲೊಳಗೆ ಇನ್ನೆಷ್ಟಿವೆಯೋ? ಇಂದಿಗೂ ಹಲವಾರು ನಿಗೂಢಗಳನ್ನು ತನ್ನ ಒಡಲೊಳಗೆ ಹುಗಿದುಕೊಂಡಿರುವ ವಿಸ್ಮಯಭರಿತ ಜೀವಜಗತ್ತು ಹಲವಾರು ಸಾಹಸಿಗಳನ್ನು ತನ್ನೆಡೆಗೆ ಸೆಳೆಯುತ್ತಲೇ ಇದೆ. ನಿಗೂಢಗಳನ್ನು ಅರಿಯುವ ಪ್ರಕ್ರಿಯೆಯಲ್ಲಿ ಅದೆಷ್ಟು ಜನ ಜೀವ ತೆತ್ತರೂ ಹುಡುಕಾಟದ ಸೆಳೆತ ಬಿಡದು.

ವಿಜ್ಞಾನಿಗಳು ಪ್ರಾಣಿಗಳ ವರ್ತನೆಯನ್ನು ಅರಿಯಲು ಹೊರಟು ಅದ್ಭುತಗಳನ್ನೇ ಸಂಶೋಧಿಸಿದ್ದಾರೆ. ಥಾರ್ನ್‌ಡೈಕ್‌ರ ಇಲಿ ಬೆಕ್ಕಿನ ಮೇಲಿನ ಪ್ರಯೋಗಗಳು, ಪ್ರಯತ್ನ ಪ್ರಮಾದ ಕಲಿಕಾ ಸಿದ್ಧಾಂತದ ಬೆಳವಣಿಗೆಗೆ ಕಾರಣವಾದವು. ಪಾವ್ಲೋವ್ ನಾಯಿಯ ಮೇಲೆ ನಡೆಸಿದ ಕ್ಲಾಸಿಕಲ್ ಕಂಡೀಷನಿಂಗ್ ಪ್ರಯೋಗ, ಇಲಿಗಳ ಮೇಲೆ ನಡೆಸಿದ ಬಿ.ಎಫ್. ಸ್ಕಿನ್ನರನ ಆಪರೆಂಟ್ ಕಂಡೀಷನಿಂಗ್, ವುಲ್ಫ್ ಗ್ಯಾಂಗ್ ಕೊಹ್ಲರ್‌ನು ಸುಲ್ತಾನ್ ಎಂಬ ಚಿಂಪಾಂಜಿಯ ಮೇಲೆ ನಡೆಸಿದ ಪ್ರಯೋಗಗಳು ನಮ್ಮ ಬದುಕಿನ ಮೇಲೆ ಹಲವು ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿವೆ.

ನಮಗೆ ಅನಾರೋಗ್ಯವಾದರೆ ವೈದ್ಯರಿದ್ದಾರೆ, ಅವರಲ್ಲಿಗೆ ಹೋಗಿ ಚಿಕಿತ್ಸೆ ಪಡೆಯುತ್ತೇವೆ. ಔಷಧಿ ಸೇವಿಸುತ್ತೇವೆ. ಮೂಕಪ್ರಾಣಿಗಳ ಗತಿಯೇನು? ಅದೆಂತಹ ಅಂತಃಶಕ್ತಿ ಅವುಗಳನ್ನು ರಕ್ಷಿಸುತ್ತಿದೆ? ಇದು ಅನಾದಿ ಕಾಲದಿಂದಲೂ ಮನುಷ್ಯನನ್ನು ಕಾಡುತ್ತಿರುವ ಪ್ರಶ್ನೆ. ಇದಕ್ಕೆ ಉತ್ತರ ಹುಡುಕುತ್ತಾ ಹೋದಾಗ ಸಿಕ್ಕ ಮಾಹಿತಿಯನ್ನು ಮನುಷ್ಯ ತನ್ನ ಆರೋಗ್ಯ ಕಾಪಾಡಲೂ ಬಳಸಿಕೊಂಡ.

ನಾಯಿ ತನ್ನ ಆರೋಗ್ಯ ಕೆಟ್ಟಾಗ ಹುಲ್ಲಿನಂತಹ ಗಿಡಮೂಲಿಕೆ ಸೇವಿಸುವುದನ್ನು ನೋಡಿದ್ದೇವೆ. ಹಾಗಾದರೆ ಈ ಗಿಡಮೂಲಿಕೆಯಲ್ಲಿ ಅಂಥದ್ದೇನಿದೆ? ಗಾಯವಾದಾಗ ಪ್ರಾಣಿಗಳು ಗಾಯವನ್ನು ನೆಕ್ಕಿ ನೆಕ್ಕಿ ವಾಸಿ ಮಾಡುವುದನ್ನು ಕಂಡಿದ್ದೇವೆ. ಹಾಗಾದರೆ ಲಾಲಾರಸದಲ್ಲಿರುವ ಅದ್ಯಾವ ವಿಶಿಷ್ಟ ರಾಸಾಯನಿಕ ಪ್ರತಿಜೀವಕ ಗುಣ ಹೊಂದಿರಬಹುದು? ಕೆಲವೊಮ್ಮೆ ಗಾಯ ವ್ರಣವಾಗಿ ಕೀವಾಗಿ ಸಾವು ಸಂಭವಿಸಬಹುದು. ‘ಹುಲಿ ಹುಣ್ಣು’ ಎನ್ನುವುದಿಲ್ಲವೇ? ಗಾಯದ ನವೆ ಮತ್ತಷ್ಟು ಕೆದಕಿ ಕೆರಳಿಸಿ ವಿಪರೀತವಾಗಿಸಿ, ನರಳುವ ಹುಲಿ ಬುದ್ಧಿ ನಮಗೂ ಪಾಠವೇ ತಾನೆ? ಹೀಗೆ ನಾವು ಪ್ರಾಣಿಗಳಿಂದ ಕಲಿತದ್ದು ಒಂದೇ ಎರಡೇ? ನಿಸರ್ಗದೇವತೆಯ ಕರುಣಾ ವರ್ಷ ಅದೆಷ್ಟು ಸುರಿದಿದೆಯೋ? ಸೋನಾರ್‌ನಂತಹ ಆಧುನಿಕ ತಂತ್ರಜ್ಞಾನದ ಆವಿಷ್ಕಾರಕ್ಕೆ ಬಾವಲಿಯ ಕೊಡುಗೆಯನ್ನು ಮರೆಯುವುದುಂಟೇ? ಹಾವಿನೊಂದಿಗೆ ಭೀಕರ ಯುದ್ಧ ಗೆದ್ದ ಮೇಲೆ